ಎನಿಸುತ್ತದೆ. ಈ ಎಲ್ಲಾ ಸಿಕ್ಕುಗಳ ನಡುವೆ ನಾನು ಕಥೆ ಬರೆಯುವುದನ್ನೇ ನಿಲ್ಲಿಸಿ ವೈಚಾರಿಕ ಸಂಗತಿಗಳತ್ತ ಹೆಚ್ಚು ಗಮನಕೊಟ್ಟೆ. ಇದರಿಂದಾಗಿ ನನ್ನ ಕಥೆಗಳು ದಣಿದಿವೆಯೆಂದು ನನಗನಿಸಿಲ್ಲ. ಅನೇಕರು ನನ್ನ ವಿಮರ್ಶೆಯ ಚಾಟಿ ಏಟು ತಿಂದವರು ಆಗಾಗ ಇಂತಹ ಅಭಿಪ್ರಾಯಗಳ ತೇಲಿಬಿಡುತ್ತಾರೆ.

◆ **ದಲಿತ ಚಿಂತನೆಯ ಒಂದು ಭಾಗ ಗಾಂಧೀಜಿಯವರನ್ನು ತರಾಟೆಗೆ ತೆಗೆದುಕೊಂಡಿದೆ. ಒಂದು ತಾತ್ವಿಕ ಭಿನ್ನಾಭಿಪ್ರಾಯವನ್ನು ಮೀರಿ ಗಾಂಧೀಜಿ– ಅಂಬೇಡ್ಕರ್ ಅವರನ್ನು ಅರಿಯಲು ಹಲವು ದಾರಿಗಳಿದ್ದವು. ಇಂಥ ದಾರಿಗಳನ್ನು ದಲಿತ ಚಿಂತನೆಯಲ್ಲಿ ಮನಗಾಣಿಸಿದವರು ದೇವನೂರ ಮಹಾದೇವ ಮತ್ತು ನೀವು. ಗಾಂಧೀ ಮತ್ತು ಅಂಬೇಡ್ಕರ್ ಅವರನ್ನು ಹೇಗೆ ಸಮೀಕರಿಸಿಕೊಂಡಿರಿ? ಇವರಿಬ್ಬರ ನಡುವಿನ ಭಿನ್ನಾಭಿಪ್ರಾಯವನ್ನು ಉದಾರವಾಗಿ ನೋಡಲು ಸಾಧ್ಯವಾದದ್ದು ಹೇಗೆ?**



ಅವರಿಬ್ಬರೂ ದೇಶದ ಕಣ್ಣುಗಳು. ಬಾಲ್ಯದಲ್ಲಿ ನಾನು ಗಾಂಧೀಜಿ ಅವರ ಬಗ್ಗೆ ತುಂಬಾ ಕಥೆಗಳನ್ನು ತಾತನ ಬಾಯಿಂದ ಕೇಳಿದ್ದೆ. ನನ್ನ ತಾತ ಗಾಂಧೀಜಿಯನ್ನು ಮುಟ್ಟಿಸಿಕೊಂಡು ಬಂದಿದ್ದ. ನಾನು ಬಿ.ಎ. ಓದಲು ಮೈಸೂರಿಗೆ ಹೋದಾಗಲೇ ಅಂಬೇಡ್ಕರ್ ಎಂಬ ಮಹಾನದಿ ಕಂಡದ್ದು. ಹಾಗಾಗಿಯೇ 'ದಲಿತೀಕರಣಗೊಂಡ ಗಾಂಧಿ ಹಾಗೂ ಅಂಬೇಡ್ಕರ್ ಎಂಬ ಮಹಾನದಿ' ಎಂಬ ಪುಸ್ತಕ ತಡವಾಗಿ ಬರೆದೆ. ಅವರಿಬ್ಬರ ಭಿನ್ನಾಭಿಪ್ರಾಯಗಳು ವೈಯಕ್ತಿಕ. ಆದರೆ ಅವರಿಬ್ಬರ ವಿಚಾರಗಳು ಜಗತ್ತಿನ ಉನ್ನತ ಸಮಾಜಕ್ಕೆ ಬೇಕಾದ ಮೌಲ್ಯಗಳನ್ನು ಒಳಗೊಂಡಿವೆ. ವಿಶೇಷ ಎಂದರೆ ಇವರಿಬ್ಬರನ್ನು ಭಾರತದ ಆಧುನಿಕ ಸಮಾಜಗಳು ಹೇಗೆ ಸಾಂಸ್ಕೃತಿಕ ವೀರರಂತೆ ಭಾವಿಸಿ ಅಪಾರವಾಗಿ ಆರಾಧಿಸಿ ಅವರ ವಿಚಾರಗಳಿಗೆ ನಡೆದುಕೊಳ್ಳುತ್ತಾರೆ ಎಂದು ಅವರ ಸುತ್ತ ಬೆಳೆದಿರುವ ಜಾನಪದವನ್ನು ಕಥನ ಶೈಲಿಯಲ್ಲಿ ಬರೆದೆ. ಗಾಂಧೀ ಜಾನಪದ, ಅಂಬೇಡ್ಕರ್ ಜಾನಪದ ದೇಶದ ತುಂಬಾ ಇದೆ ಎಂದರೆ ಈ ದೇಶ ಇವರಿಬ್ಬರಲ್ಲಿ ಏನನ್ನೋ ಕಂಡಿದೆ ಎಂದರ್ಥ.

**ಬದ್ಧತೆಯು ಮಾವಿನ ಹಣ್ಣಿನ ಒಳಗಿನ ಬೀಜದಂತೆ ಇರಬೇಕು. ಬಿಸಾಡಿದ ಬೀಜ ಮತ್ತೆ ಜೀವ ಕಾಣುವಂತೆ ಬರಹವನ್ನು ಮಾಡಬೇಕು**

◆ **ನೀವು ಕಥೆ, ಕಾವ್ಯ, ಕಾದಂಬರಿ, ಪ್ರಬಂಧ, ವಿಚಾರ, ವಿಮರ್ಶೆ, ಸಂಶೋಧನೆ, ಜಾನಪದ, ಆತ್ಮಕಥೆ ಹೀಗೆ ಎಲ್ಲಾ ಪ್ರಕಾರಗಳಲ್ಲಿ ಬರಹ ಮಾಡಿದ್ದೀರಿ; ನಾಟಕ ಪ್ರಕಾರವೊಂದನ್ನು ಬಿಟ್ಟು. ನಾಟಕ ಕೃತಿಯೊಂದನ್ನು ಬರೆಯಬೇಕು ಅನ್ನಿಸಲಿಲ್ಲವೆ?**

ದಲಿತ ಲೇಖಕರು ಯಾಕೋ ನಾಟಕ ರಚನೆಗೆ ಮುಂದಾಗಲಿಲ್ಲ. ಅವರ ಗದ್ಯ ಬರಹಗಳಲ್ಲಿ, ಕಾವ್ಯದಲ್ಲಿ ನಾಟಕೀಯ ಅಂಶಗಳು ಸಾಕಷ್ಟಿವೆ. ನಾನು 1992ರಲ್ಲಿ ಸಾಕ್ಷರತಾ ಆಂದೋಲನದ ಭಾಗವಾಗಿ ಸಿ. ಬಸವಲಿಂಗಯ್ಯ ಮತ್ತು  ಜೆನ್ನಿ ಅವರ ಒತ್ತಾಯದಿಂದಾಗಿ ನಾಲ್ಕು ಬೀದಿ ನಾಟಕಗಳನ್ನು ಬರೆದಿದ್ದೆ. ಆಗ ನನ್ನ ನಾಟಕಗಳಿಗೆ ಕೋಟಗಾನಹಳ್ಳಿ ರಾಮಯ್ಯ ಹಾಡು ಬರೆದಿದ್ದರು. ಪಿಚ್ಚಳ್ಳಿ ಶ್ರೀನಿವಾಸ್ ಸಖತ್ತಾಗಿ ರಾಗ ಹಾಕಿ ಹಾಡಿದ್ದರು. ರಾಮಯ್ಯ ಒಬ್ಬರೇ ದಲಿತರಲ್ಲಿ ಹೆಚ್ಚಾಗಿ ಕಿರುನಾಟಕಗಳನ್ನು ಸಾಂದರ್ಭಿಕವಾಗಿ ಬರೆದಿರುವುದು. ಅವರ ನಾಟಕಗಳು ನನಗೆ ಹಿಡಿಸಲಿಲ್ಲ. ನಾನೀಗ ಷಹಜಹಾನ್ ಬಗ್ಗೆ ಒಂದು ನಾಟಕ ಬರೆಯುತ್ತಿರುವೆ.

◆ **ಥ್ಯಾಂಕ್ಯೂ ಸರ್. ಬಹಳಷ್ಟು ಮಾತಾಡಿದೆ.**

ಥ್ಯಾಂಕ್ಯೂ. ಸಾಮಾನ್ಯವಾಗಿ ಸಂದರ್ಶನಗಳೆಂದರೆ ನನಗೆ ಮುಜುಗರ. ಅಲ್ಲದೇ ಅನೇಕರು ನನ್ನನ್ನು ಸಂದರ್ಶಿಸಲು ಇಷ್ಟಪಡುವುದಿಲ್ಲ. ●